**ಪಾಠ–10** **ಫೆಬ್ರವರಿ 26–ಮಾರ್ಚ್ 4**

# ಯೇಸುಕ್ರಿಸ್ತನು ತೆರೆಯ ಮೂಲಕ ದಾರಿಮಾಡಿದನು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಇಬ್ರಿಯ 9:24, ವಿ.ಕಾಂಡ 19:3,4, ಇಬ್ರಿಯ 12:18–21, ಯಾ.ಕಾಂಡ 16:1,2, ಇಬ್ರಿಯ 10:19–22, ಕೊಲಸ್ಸೆ 3:1.

**ಸ್ಮರಣವಾಕ್ಯ : "ಯಾಕೆಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪ ಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟಿದ್ದಾಗಿಯೂ ಇರುವ ಆಲಯದಲ್ಲಿ ಪ್ರವೇಶಿಸದೆ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವುದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು"** (ಇಬ್ರಿಯ 9:24).

ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋದನಂತರ ಶಿಷ್ಯರು ಎಣ್ಣೇಮರದ ಗುಡ್ಡದಿಂದ ಹಿಂದಿರುಗಿ ಬಂದಾಗ ಅದರಲ್ಲಿ ಸಂತೋಷವೂ ಗೆಲುವಿನ ಭಾವವೂ ತುಂಬಿತ್ತು. ಅವರ ಒಡೆಯನು (ಕರ್ತನು) ಮತ್ತು ಸ್ನೇಹಿತನು ಲೋಕದ ಅಧಿಕಾರಸ್ಥಾನಕ್ಕೆ ಏರಿದವನಾಗಿ ಅವರನ್ನು ಪರಿಪೂರ್ಣ ವಿಶ್ವಾಸ ಹೊಂದಿದವರಾಗಿ ದೇವರ ಬಳಿಗೆ ಬಂದರೆ ಅವರ ಪ್ರಾರ್ಥನೆಗಳಿಗೆ ದೇವರು ಸದುತ್ತರಗಳನ್ನು ದಯಪಾಲಿಸುತ್ತಾನೆಂದು ಆಹ್ವಾನಿಸಿದನು (ಯೋಹಾನ 14:13,14). ಈ ಲೋಕದಲ್ಲಿ ಅವರಿಗೆ ಅಂಧಕಾರ ಶಕ್ತಿಗಳು ಆವರಿಸಿಕೊಂಡರೂ ಅವರ ನಿರೀಕ್ಷೆಯು ಬಲವುಳ್ಳದ್ದಾಗಿತ್ತು. ಯೇಸುವು ತಮಗೋಸ್ಕರ ಸ್ಥಳವನ್ನು ಸಿದ್ಧಪಡಿಸಲು ಹೋಗಿದ್ದಾನೆಂಬುದು ಅವರಿಗೆ ಗೊತ್ತಿತ್ತು (ಯೋಹಾನ 14:1–3) ತಮ್ಮ ರಕ್ಷಣೆಯ

---

* ಈ ಪಾಠವನ್ನು ಮಾರ್ಚ್5ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ನಾಯಕನು ತನ್ನ ರಕ್ತದಿಂದ ಪರಲೋಕ ನಿವಾಸಕ್ಕೆ ದಾರಿ ಮಾಡಿದನೆಂದು ಅರಿತಿದ್ದರು.

ಇಬ್ರಿಯರ ದೇವಧರ್ಮಶಾಸ್ತ್ರದ ಕೇಂದ್ರವು ಯೇಸುವಿನ ಪರಲೋಕದ ಆರೋಹಣವಾಗಿದೆ. ಇದು ಕ್ರಿಸ್ತನ ಆಳ್ವಿಕೆಯ ಮತ್ತು ನಮ್ಮ ಪರವಾಗಿ ಆತನು ಮಾಡುವ ಮಹಾಯಾಜಕ ಸೇವೆಯ ಆರಂಭವನ್ನು ಸೂಚಿಸುವ ಗುರುತಾಗಿದೆ. ಇದಕ್ಕಿಂತಲೂ ಮುಖ್ಯವಾಗಿ ಯೇಸುವಿನ ಆರೋಹಣವು ಹೊಸ ಒಡಂಬಡಿಕೆಯ ಆಂದೋಲನವನ್ನು ಅಂದರೆ ನಾವು ನಂಬಿಕೆಯಿಂದ ದೇವರ ಬಳಿಗೆ ಧೈರ್ಯದಿಂದ ಹೋಗುವುದಕ್ಕೆ ದಾರಿ ತೆರೆದುದಕ್ಕೆ ಗುರುತಾಗಿದೆ. ಈವಾಗ ನಾವು ದೇವರನ್ನು ಯೇಸುವಿನ ಮತ್ತು ಆತನ ನೀತಿಯ ಅರ್ಹತೆಯ ಮೂಲಕ ಸಮೀಪಿಸುವುದು ನಮ್ಮ ಭಾಗ್ಯವಾಗಿದೆ.

**ಭಾನುವಾರ** **ಫೆಬ್ರವರಿ 27**

## ಯೇಸುವು ತಂದೆಯ ಸಮ್ಮುಖದಲ್ಲಿ

ಇಬ್ರಿಯ 9:24ನೇ ವಚನವನ್ನು ಓದಿರಿ. ಈ ವಚನದ ಪ್ರಕಾರ ಯೇಸುವು ಪರಲೋಕಕ್ಕೆ ಏರಿಹೋದ ಉದ್ದೇಶವೇನು?

ಇಸ್ರಾಯೇಲ್ಯರ ಗಂಡಸರು ವರ್ಷಕ್ಕೆ ಮೂರಾವರ್ತಿ ಯೆರೂಸಲೇಮಿನ ದೇವಾಲಯದಲ್ಲಿ ದೇವರ ಸಮ್ಮುಖಕ್ಕೆ ನೆರೆದು ಬರಬೇಕೆಂದು ದೇವರು ಅವರಿಗೆ ಅಪ್ಪಣೆ ಕೊಟ್ಟಿದ್ದನು. ಹುಳಿಯಿಲ್ಲದ ರೊಟ್ಟಿಗಳನ್ನು ತಿನ್ನಬೇಕಾದ ಜಾತ್ರೆ, ಹೊಲದಲ್ಲಿ ಪ್ರಥಮ ಫಲ ದೊರೆತಾಗ ಸುಗ್ಗಿಯ ಜಾತ್ರೆ, ವರುಷದ ಕೊನೆಯಲ್ಲಿ ಫಲಸಂಗ್ರಹ ಜಾತ್ರೆಯನ್ನು ಆಚರಿಸಬೇಕಾಗಿತ್ತು (ವಿ.ಕಾಂಡ 23:14–17, ಧ.ಕಾಂಡ 16:16). ಇಸ್ರಾಯೇಲ್ಯರು ತಾವು ಐಗುಪ್ತ ದೇಶದಿಂದ ವಿಮೋಚನೆ ಹೊಂದಿದ ನಿಮಿತ್ತ ಅದರ ಸ್ಮರಣೆಗಾಗಿ ಹುಳಿಯಿಲ್ಲದ ರೊಟ್ಟಿಯ ಹಬ್ಬವನ್ನು ಆಚರಿಸಬೇಕಾಗಿತ್ತು, ಜವೆಗೋದಿಯ ಸುಗ್ಗಿಹಬ್ಬವನ್ನು ಪಂಚಾಶತ್ತಮ ದಿನವಾಗಿ ಆಚರಿಸಬೇಕಾಗಿತ್ತು. ಹೊಸ ಒಡಂಬಡಿಕೆಯ ಕಾಲದಲ್ಲಿ ಇದನ್ನು ಸಿನಾಯಿ ಬೆಟ್ಟದಲ್ಲಿ ದಶಾಜ್ಞೆಗಳನ್ನು ಕೊಟ್ಟ ಸಂದರ್ಭಕ್ಕೆ ಸಂಬಂಧಪಡಿಸಲಾಯ್ತು. ಇಸ್ರಾಯೇಲ್ಯರು ಅರಣ್ಯದಲ್ಲಿ ಪ್ರಯಾಣ ಮಾಡುವಾಗ ಅವರನ್ನು ದೇವರು ಪರಾಂಬರಿಸಿ ಕಾಪಾಡಿದ್ದರಿಂದ ಹಬ್ಬಗಳನ್ನು

ಆಚರಿಸಬೇಕಾಗಿತ್ತು. ಹಳೆಯ ಒಡಂಬಡಿಕೆಯ ಕಾಲದ ಈ ಹಬ್ಬಗಳು ಹೊಸ ಒಡಂಬಡಿಕೆಯ ಪ್ರಕಾರ ಪ್ರವಾದನೆಯ ಮಹತ್ವವುಳ್ಳವುಗಳಾಗಿದ್ದವು.

ಇಬ್ರಿಯ 9:24ನೇ ವಚನವು ಯೇಸುವು ಆರೋಹಣಗೊಂಡು ದೇವರ ಸನ್ನಿಧಿಗೆ ಒಯ್ಯಲ್ಪಟ್ಟದ್ದನ್ನು ವಿವರಿಸುತ್ತದೆ. ಯೇಸುವು ಪರಲೋಕದ ನಿಜವಾದ ದೇವದರ್ಶನ ಗುಡಾರಕ್ಕೆ ಶ್ರೇಷ್ಠವಾದ ಯಜ್ಞವನ್ನು (ತನ್ನ ರಕ್ತ) ತೆಗೆದುಕೊಂಡು ಬಂದನು (ಇಬ್ರಿಯ 9:23,24).

ಯೇಸುವು ಪಸ್ಕಹಬ್ಬದ ಪ್ರವಾದನೆಯ ಮಹತ್ವವನ್ನು ಸೋಜಿಗ ಪಡುವಂತಹ ನಿಖರತೆಯೊಂದಿಗೆ ನೆರವೇರಿಸಿದನು. ಆತನು ಪಸ್ಕಹಬ್ಬದ ಸಿದ್ಧತೆಯ ದಿನದಲ್ಲಿ 9 ಗಂಟೆಗಳು ಕಳೆದ ಮೇಲೆ ಅಂದರೆ ಪಸ್ಕಹಬ್ಬದ ಕುರಿಮರಿಯನ್ನು ವಧಿಸಬೇಕಾದ ಸಮಯಕ್ಕೆ ಸರಿಯಾಗಿ ಶಿಲುಬೆಯ ಮೇಲೆ ಪ್ರಾಣ ಬಿಟ್ಟನು (ಯೋಹಾನ 19:14, ಮತ್ತಾಯ 27:45–50). ಯೇಸುವು ಮೂರನೆಯ ದಿನದಲ್ಲಿ ಪುನರುತ್ಥಾನಗೊಂಡು ತನ್ನ ಯಜ್ಞವು ಅಂಗೀಕಾರವಾದುದಕ್ಕೆ ಖಾತ್ರಿ ಹೊಂದಲು ಪರಲೋಕಕ್ಕೆ ಏರಿಹೋದನು (ಯೋಹಾನ 20:17, 1 ಕೊರಿಂಥ 15:20). ಇಸ್ರಾಯೇಲ್ಯರು ದೇವರ ಸನ್ನಿಧಾನದಲ್ಲಿ ಅಂಗೀಕಾರವಾಗುವಂತೆ ಜವೆಗೋಧಿಯ ಪ್ರಥಮ ಫಲದ ಸಿವುಡನ್ನು ಯಾಜಕನು ಯಹೋವನ ಸನ್ನಿಧಿಯಲ್ಲಿ ನಿವಾಳಿಸುತ್ತಿದ್ದಂತೆ ಯೇಸುವು ಪರಲೋಕಕ್ಕೆ ಏರಿಹೋದನು (ಯಾ.ಕಾಂಡ 23:10–12).

ಅನಂತರ ಆತನು ಶಿಷ್ಯರಿಗೆ ಕಾಣಿಸಿಕೊಂಡು ಅವರೊಟ್ಟಿಗೆ 40 ದಿನಗಳು ಇದ್ದು ಪಂಚಾಶತ್ತಮ ದಿನದಂದು ಮತ್ತೆ ಪರಲೋಕಕ್ಕೆ ಆರೋಹಣ ಮಾಡಿ ದೇವರ ಸಿಂಹಾಸನದಲ್ಲಿ ಬಲಪಾರ್ಶ್ವದಲ್ಲಿ ಕೂತುಕೊಂಡನು, ಹೀಗೆ ಹೊಸ ಒಡಂಬಡಿಕೆಯನ್ನು ಆರಂಭಗೊಳಿಸಿದನು (ಅ.ಕೃ 1 ಮತ್ತು 2ನೇ ಅಧ್ಯಾಯಗಳು).

ಪೂರ್ವಕಾಲದ ಇಸ್ರಾಯೇಲ್ಯರು ದೇವರ ಸಾನಿಧ್ಯದಲ್ಲಿ ಆತನ ದರ್ಶನ ಪಡೆಯುವುದಕ್ಕಾಗಿ ಉತ್ಸವಗಳಲ್ಲಿ ಸೇರುತ್ತಿದ್ದರು (ಕೀರ್ತ 42:2). ದೇವರ ಅನುಗ್ರಹ ಅನುಭವ ಹೊಂದುವುದಕ್ಕಾಗಿ ನೆರೆದು ಬರುತ್ತಿದ್ದರು (ಕೀರ್ತ 17:15). ದೇವರ ದರ್ಶನ ಪಡೆಯುವುದು ಎಂದರೆ ದೇವರ ಸಹಾಯವನ್ನು ಬೇಡುವುದು ಎಂಬ ಅರ್ಥವಿದೆ (2 ಪೂ.ವೃ 7:14, ಕೀರ್ತ 27:8, ಕೀರ್ತ 105:4). ಈ ಅರ್ಥದಲ್ಲಿ

ಇಬ್ರಿಯ ಪತ್ರಿಕೆಯು ಯೇಸುವಿನ ಆರೋಹಣವನ್ನು ಕುರಿತು ಹೇಳುತ್ತದೆ. ಯೇಸುವು ಪರಿಪೂರ್ಣ ಯಜ್ಞವಾಗಿ ದೇವರ ಬಳಿಗೆ ಏರಿಹೋದನು. ಯೇಸುವು ಓಡುವವರ ಓಟದಲ್ಲಿ ಮುಂದಾಗಿ ಓಡಿದವನಾಗಿ ದೇವರ ಸನ್ನಿಧಾನದಲ್ಲಿ ಕಾಣಿಸಿಕೊಂಡಿದ್ದಾನೆ (ಇಬ್ರಿಯ 6:19,20).

ಉತ್ತಮವಾದ ದೇಶವನ್ನು, ದೇವರೇ ಶಿಲ್ಪಿಯಾಗಿ ಕಟ್ಟಿರುವ ಉತ್ತಮವಾದ ನಗರದಲ್ಲಿರುವ ನಿವಾಸವನ್ನು ಹಾರೈಸಿ ಪ್ರವಾಸಿಗರಾದ ವಿಶ್ವಾಸಿಗಳಿಗೆ ವಾಗ್ದಾನವನ್ನು ಯೇಸುವು ವಾಸ್ತವಕ್ಕೆ ತಂದಿದ್ದಾನೆ (ಇಬ್ರಿ 1:10, ಇಬ್ರಿ 13:16).

ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದುದು ಮಾತ್ರವಲ್ಲದೆ ಈವಾಗ ಪರಲೋಕದಲ್ಲಿ ಮಾಡುತ್ತಿರುವ ಯಾಜಕಸೇವೆಯು ನಮಗೆ ರಕ್ಷಣೆಯ ಭರವಸೆಯನ್ನು ವಾಸ್ತವಗೊಳಿಸುತ್ತದೆ ಏಕೆ?

**ಸೋಮವಾರ** **ಫೆಬ್ರವರಿ 28**

## ದೇವರ ಆಹ್ವಾನ

ಇಬ್ರಿಯ 12:18–21 ವಚನಗಳನ್ನು ಓದಿರಿ : ಸಿನಾಯಿ ಬೆಟ್ಟದಲ್ಲಿ ಇಸ್ರಾಯೇಲ್ಯರಿಗೆ ಯಾವ ಅನುಭವ ಆಯಿತು?

ದೇವರು ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಕರೆತಂದಾಗ ಅವರೊಂದಿಗೆ ವೈಯಕ್ತಿಕವಾಗಿ ನಿಕಟವಾದ ಸಂಬಂಧ ಹೊಂದುವ ಯೋಜನೆಯುಳ್ಳವನಾಗಿದ್ದನು. "ನಾನು ಐಗುಪ್ತರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೇ" ಎಂದು ದೇವರು ಹೇಳುತ್ತಾನೆ (ವಿ.ಕಾಂಡ 19:3,4).

ಹೀಗೆ ದೇವರು ಜನರನ್ನು ಸಂಧಿಸಲು ಸಿದ್ಧವಾಗುವಂತೆ ಮಾಡಲು ಮೋಶೆಯ ಮುಖಾಂತರ ಅಗತ್ಯವಾದ ಉಪದೇಶಗಳನ್ನು ಕೊಟ್ಟನು. ಜನರು ತಮ್ಮನ್ನು ತಾವು ಶುದ್ಧಪಡಿಸಿಕೊಂಡು ದೇವರ ಹತ್ತಿರ ಬರಬೇಕಾಗಿತ್ತು (ವಿ.ಕಾಂಡ 19:10–15). ಯಾರು ಯಾವುದೇ ಸಿದ್ಧತೆ ಮಾಡಿಕೊಳ್ಳದೆ ಬೆಟ್ಟವನ್ನು ಹತ್ತಲು ಹೋಗುತ್ತಾರೋ ಅವರು ಸಾಯುತ್ತಾರೆ. ಆದಾಗ್ಯೂ ಎರಡು ದಿನಗಳಲ್ಲಿ ಸಿದ್ಧತೆ ಮಾಡಿಕೊಂಡ

ಮೇಲೆ ಮೂರನೇ ದಿನ ತುತೂರಿಯನ್ನು ದೀರ್ಘವಾಗಿ ಊದಿದ ಮೇಲೆ ಬೆಟ್ಟದ ಹತ್ತಿರ ಧಾವಿಸಿ ಬರಬೇಕೆಂದು ದೇವರು ಅವರಿಗೆ ಸೂಚನೆ ನೀಡಿದ್ದನು (ವಿ.ಕಾಂಡ 19:13). ಮೋಶೆ ಮತ್ತು ಜನರ ನಾಯಕರಾದವರಿಗೆ ಬೆಟ್ಟವನ್ನು ಏರಿಹೋದಾಗ ಆಗುವ ಅನುಭವವು ಜನರಿಗೂ ಆಗಬೇಕೆಂದು ಮತ್ತು ಅವರು ಆತನ ಸನ್ನಿಧಾನದಲ್ಲಿ ಉಂಡುಕುಡಿದು ಸಂತೋಷಪಡಬೇಕೆಂದು ದೇವರು ಬಯಸಿದ್ದನು (ವಿ.ಕಾಂಡ 24:9–11). ಆಮೇಲೆ ಜನರು ದೇವರು ಮಹಿಮೆಯನ್ನು ನೋಡುತ್ತಿದ್ದರು ಮತ್ತು ಆತನು ಜನರ ಜೊತೆ ಮಾತಾಡುತ್ತಿದ್ದನು. ಅವರು ಆತನ ಜೊತೆ ಮಾತಾಡಿಯೂ ಬದುಕುಳಿದರು (ಧ.ಕಾಂಡ 5:24). ಆದರೆ ಸಮಯವು ಬಂದಾಗ ಜನರಿಗೆ ನಂಬಿಕೆ ಸಾಲದಾಯ್ತು. ಮೋಶೆಯು ವರ್ಷಗಳು ಕಳೆದ ಮೇಲೆ ನೀವು ಆ ಬೆಂಕಿಯ ಜ್ವಾಲೆಯ ದೆಸೆಯಿಂದ ಭಯಪಟ್ಟು ಬೆಟ್ಟವನ್ನು ಹತ್ತಲಾರದೆ ಹೋದಿರಿ ಎಂಬುದಾಗಿ ಅವರಿಗೆ ವಿವರಿಸುತ್ತಾನೆ (ಧ.ಕಾಂಡ 5:5). ಆದುದರಿಂದ ಜನರು ಮೋಶೆಯೇ ತಮ್ಮ ಪರವಾಗಿ ದೇವರ ಸನ್ನಿಧಾನದಲ್ಲಿ ಮಾತಾಡಲಿ ಎಂದು ಜನರು ಬಯಸಿದರು (ಧ.ಕಾಂಡ 5:25–27). ಇದನ್ನು ವಿ.ಕಾಂಡ 20:18–21 ವಚನಗಳೊಂದಿಗೆ ಹೋಲಿಸಿರಿ.

ದೇವರು ಕರುಣೆಯೂ ಕೃಪೆಯು ಉಳ್ಳವನು ಎಂಬ ಪಾಠವನ್ನು ಕಲಿಸುವ ವಚನಗಳಿಗೆ ಹೋಲಿಸಿರಿ... ವಿ.ಕಾಂಡ 34:4–8 ಹಾಗಾಗಿ ದೇವರು ಇಸ್ರಾಯೇಲ್ಯರನ್ನು ತನ್ನ ಬಳಿಗೆ ಬರುವಂತೆ ಕರೆಯುವಾಗಲೆಲ್ಲಾ ಜನರು ಭಯಪಟ್ಟುಕೊಂಡು ಮೋಶೆಯನ್ನು ಮಧ್ಯಸ್ಥಿಕೆ ವಹಿಸುವಂತೆ ಮನವಿ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ನಡೆದ ಘಟನೆಗಳ ವಿವರಣೆಯನ್ನು ಇಬ್ರಿಯ ಪತ್ರಿಕೆಯಲ್ಲಿ ಕಾಣುತ್ತೇವೆ. ಇಸ್ರಾಯೇಲ್ಯರು ಆವಾಗ ಇಸ್ರಾಯೇಲ್ಯರು ಚಿನ್ನದ ಬಸವನನ್ನು ಮಾಡಿಕೊಂಡು ಅಪನಂಬಿಕೆಯಿಂದ ಪಾಪ ಮಾಡಿ ಭ್ರಷ್ಟರಾದರಿಂದ ಮೋಶೆಯು ದೇವರ ಸಾನಿಧ್ಯಕ್ಕೆ ಹೋಗಲು ಹೆದರಿಕೊಂಡಿದ್ದನ್ನು ಅವರಿಗೆ ಮತ್ತೊಮ್ಮೆ ಜ್ಞಾಪಕಪಡಿಸುತ್ತಾನೆ (ಧ.ಕಾಂಡ 9:19). ಜನರು ತೋರಿದ ಪ್ರತಿಕ್ರಿಯೆಯು ದೇವರ ಯೋಜನೆಯಾಗಿರದೆ ಅವರ ಅಪನಂಬಿಕೆಯ ಫಲಿತಾಂಶವಾಗಿತ್ತು.

ನಾವು ಯೇಸುವಿನ ನಿಮಿತ್ತ ದೇವರ ಬಳಿಗೆ ಬರುವುದಕ್ಕೆ ಭಯಪಡುವುದಿಲ್ಲ ಏಕೆ? ನಾವು ದೇವರ ಬಳಿಗೆ ಹೋಗುವುದಕ್ಕೆ ಇರುವ ಷರತ್ತುಗಳಾವುವು?

**ಮಂಗಳವಾರ** **ಮಾರ್ಚ್ 1**

## ತೆರೆಯ ಅಗತ್ಯತೆ

ತೆರೆಯು ಎರಡು ಕಾರ್ಯಗಳನ್ನು ಹೊಂದಿತ್ತು. ತೆರೆಗೆ ಉಪಯೋಗಿಸಿರುವ ಇಬ್ರಿಯ ಪದ 'ಕಟೆಪೆಟೆಸ್ಮಾ' ಎಂಬುದು ಅಂಗಳದ ಪರದೆಯನ್ನು ಸೂಚಿಸುತ್ತದೆ (ವಿ.ಕಾಂಡ 38:18), ಇನ್ನೊಂದು ದೇವದರ್ಶನ ಗುಡಾರದ ಹೊರಾಂಗಣದಿಂದ ಗುಡಾರದ ಪ್ರವೇಶ ದ್ವಾರದಲ್ಲಿ ಕಟ್ಟಿರುವ ಪರದೆ (ವಿ.ಕಾಂಡ 36:37) ಮತ್ತು ಒಳಗಡೆ ಪರಿಶುದ್ಧ ಸ್ಥಳದಿಂದ ಮಹಾಪರಿಶುದ್ಧ ಸ್ಥಳವನ್ನು ಬೇರ್ಪಡಿಸಲು ಕಟ್ಟಿರುವ ಪರದೆ ವಿ.ಕಾಂಡ 26:31–35). ಈ ಮೂರು ಪರದೆಗಳು ಕೆಲವರು ಮಾತ್ರ ಹೋಗಬಹುದಾದ ಪ್ರವೇಶದ್ವಾರಗಳು ಮತ್ತು ಸರಹದ್ದುಗಳಾಗಿದ್ದವು.

ಯಾಜಕಕಾಂಡ 16:1,2 ಮತ್ತು 10:1–3 ವಚನಗಳನ್ನು ಓದಿರಿ. ಈ ವಚನ ವೃಂದದಲ್ಲಿ ನಮಗೆ ಯಾವ ಎಚ್ಚರಿಕೆಗಳಿವೆ?

ಪರಿಶುದ್ಧ ದೇವರ ಸನ್ನಿಧಿಯಲ್ಲಿ ಸೇವೆಯನ್ನು ಗೈಯ್ಯುವ ಯಾಜಕರಿಗೆ ತೆರೆಯು ಒಂದು ಸಂರಕ್ಷಣೆಯಾಗಿತ್ತು. ಇಸ್ರಾಯೇಲ್ಯರು ಚಿನ್ನದ ಬಸವನನ್ನು ಪೂಜಿಸಿ ಪಾಪ ಮಾಡಿದ ಮೇಲೆ ಅವರು ಮೊಂಡರಾದ ಪ್ರಯುಕ್ತ ನಾಶವಾಗುವರೆಂದು ದೇವರು ಅವರ ಜೊತೆ ವಾಗ್ದತ್ತ ದೇಶಕ್ಕೆ ಬರುವುದಿಲ್ಲವೆಂದು ಮೋಶೆಗೆ ತಿಳಿಸಿದನು (ವಿ.ಕಾಂಡ 33:3). ಆದುದರಿಂದ ಮೋಶೆಯು ದೇವರನ್ನು ಸಂಧಿಸುವ ಗುಡಾರವನ್ನು ಪಾಳೆಯದ ಹೊರಗೆ ಹಾಕಿಸಿದನು (ವಿ.ಕಾಂಡ 33:7). ಮೋಶೆಯು ದೇವರ ಸಂಗಡ ಸಂಧಾನ ಮಾಡಿದ್ದರಿಂದ ದೇವರು ಅವರ ಮಧ್ಯೆದಲ್ಲಿ ಒಂದು ಪ್ರಯಾಣ ಮಾಡಲು ಒಪ್ಪಿದನು (ವಿ.ಕಾಂಡ 33:12–20). ಆದರೆ ಆತನು ಜನರ ಮಧ್ಯೆದಲ್ಲಿ ವಾಸಿಸುವಾಗ ಯಾವ ತೊಂದರೆಯೂ ಅವರಿಗೆ ಆಗ ಬಾರದೆಂದು ಅನೇಕ ಕ್ರಮಗಳನ್ನು ಸ್ಥಾಪಿಸಿದನು.

ಉದಾಹರಣೆಗೆ, ಇಸ್ರಾಯೇಲ್ಯರು ಕ್ರಮಬದ್ಧವಾಗಿ ಪಾಳೆಯದಲ್ಲಿ ವಾಸವಾಗಿದ್ದುದರಿಂದ ಅವರ ಮಧ್ಯೆದಲ್ಲಿ ಪರಿಶುದ್ಧತೆಯು ಚೌಕವು ದೇವದರ್ಶನಗುಡಾರದಲ್ಲಿ ಏರ್ಪಟ್ಟಿತ್ತು. ದೇವದರ್ಶನಗುಡಾರದ ಸುತ್ತಲೂ ಲೇವಿಕುಲದವರು (ಯಾಜಕವರ್ಗ) ಅದರ ಸಂರಕ್ಷಣೆಗೆಂದು ಶಿಬಿರ ಮಾಡಿಕೊಂಡಿದ್ದರು (ಅರಣ್ಯಕಾಂಡ 1:51 ಮತ್ತು ಅರಣ್ಯಕಾಂಡ 3:10) ಅವರು

ಜನರನ್ನು ಸಂರಕ್ಷಿಸುವ ಜೀವಂತ ತೆರೆಯಂತಿದ್ದರು. ಲೇವಿಯರು ಮಾತ್ರ ತಮ್ಮ ಡೇರೆಗಳನ್ನು ದೇವದರ್ಶನಗುಡಾರದ ಸುತ್ತಲೂ ಹಾಕಿಕೊಳ್ಳಬೇಕು. ಹೀಗಾದರೆ ಯುಹೋವನ ಕೋಪವು ಇಸ್ರಾಯೇಲ್ಯರ ಮೇಲೆ ಉಂಟಾಗುವುದಕ್ಕೆ ಆಸ್ಪದವಿರುವುದಿಲ್ಲ. ಲೇವಿಯರು ದೇವದರ್ಶನ ಗುಡಾರವನ್ನು ಕಾಯುವವ–ರಾಗಿರಬೇಕು (ಅ.ಕಾಂಡ 1:53).

ಯೇಸು ನಮ್ಮ ಯಾಜಕನಾಗಿ ನಮ್ಮನ್ನು ಸಂರಕ್ಷಿಸುವ ತೆರೆಯಾಗಿದ್ದಾನೆ. ಆತನು ನರಾವತಾರವೆತ್ತುವ ಮೂಲಕ ದೇವರು ನಮ್ಮ ಮಧ್ಯೆದಲ್ಲಿ ವಾಸಿಸಿದನು ಮತ್ತು ಆತನ ಮಹಿಮೆಯನ್ನು ನಾವು ನೋಡಲು ಸಾಧ್ಯವಾಯಿತು (ಯೋಹಾನ 1:14–18). ಪರಿಶುದ್ಧನಾದ ದೇವರು ಅಪರಿಪೂರ್ಣರಾದ ಮಾನವರ ಮಧ್ಯೆ ವಾಸಿಸುವುದಕ್ಕೆ ಯೇಸುವು ಸಾಧ್ಯಮಾಡಿದನು.

ಇಡೀ ವಿಶ್ವವನ್ನೇ ಸೃಷ್ಟಿಸಿದ ಕರ್ತನು ಒಂದು ಕಾಲದಲ್ಲಿ ದಾಸತ್ವದಿಂದ ತಪ್ಪಿಸಿಕೊಳ್ಳಲು ಓಡಿಹೋದ ಜನಾಂಗದ ಮಧ್ಯೆ ವಾಸಿಸುವುದರ ಬಗ್ಗೆ ಆಲೋಚಿಸಿರಿ. ಇದು ದೇವರು ನಮಗೆ ಎಷ್ಟು ಹತ್ತಿರವಾಗಿದ್ದಾನೆಂಬುದರ ಬಗ್ಗೆ ಏನನ್ನು ಕಲಿಸುತ್ತದೆ?

**ಬುಧವಾರ** **ಮಾರ್ಚ್ 2**

## ತೆರೆಯ ಮೂಲಕ ಹೊಸ ಸಜೀವಮಾರ್ಗ

ಇಬ್ರಿಯ 10:19–22 ವಚನಗಳನ್ನು ಓದಿರಿ. ಈ ವಚನವೃಂದದಲ್ಲಿ ನಮಗೆ ಎಂತಹ ಆಹ್ವಾನವಿದೆ?

ಯೇಸುವು ಪರಲೋಕದ ದೇವದರ್ಶನ ಗುಡಾರವನ್ನು ಪ್ರವೇಶಿಸಿದನು ಮತ್ತು ನಮ್ಮನ್ನು ಸಹಾ ತನ್ನ ಹಿಂದೆ ಬರುವಂತೆ ಆಹ್ವಾನಿಸುತ್ತಾನೆಂದು ಇಬ್ರಿಯ ಪತ್ರಿಕೆಯು ವಾದ ಮಾಡುತ್ತದೆ. ಹಿಂದಿನ ಪಾಠಗಳಲ್ಲಿ ಯೇಸುವನ್ನು ನಮ್ಮ ಮುಂದಾಳುವೆಂದು ಮತ್ತು ನಮ್ಮ ಪರವಾಗಿ ಮುಂದಾಗಿ ಓಟವನ್ನು ಓಡಿದವನೆಂದು ಪರಿಚಯ ಮಾಡಲಾಗಿದೆ, ಈ ಆಲೋಚನೆಯು ಆತನು ನಮ್ಮನ್ನು ಸಹಾ ಆಹ್ವಾನಿಸುತ್ತಾನೆಂಬುದಕ್ಕೆ ಇಂಬುಕೊಡುವಂಥದ್ದಾಗಿದೆ (ಇಬ್ರಿಯ 2:10, ಇಬ್ರಿಯ 6:19,20, ಇಬ್ರಿಯ 12:2). ಯೇಸುವು ತನ್ನ ಯಜ್ಞ ಮತ್ತು ಆರೋಹಣದಿಂದ "ಹೊಸ ಜೀವಮಾರ್ಗ"ವೆಂಬ ಹೊಸ ಒಡಂಬಡಿಕೆಯ ಆರಂಭವಾಗಿದ್ದಾನೆ. ಹೊಸ

ಮತ್ತು ಸಜೀವವೆಂಬ ಉಕ್ತಿಯು ಹಳೆಯದು ಮುತ್ತು ಮುದಿಯಾಗುವಂಥದ್ದು ಎಂಬ ವಿವರಣೆಗೆ ವ್ಯತಿರಿಕ್ತವಾಗಿದೆ (ಇಬ್ರಿಯ 8:13).

ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಕೊಟ್ಟು, ನಮ್ಮ ಹೃದಯಗಳಲ್ಲಿ ಆಜ್ಞೆಗಳನ್ನು ಇಟ್ಟು ದೇವರನ್ನು ನಮ್ಮ ಪುಣ್ಯಕ್ರಿಯೆಗಳಿಂದ ಮೆಚ್ಚಿಸದೆ, ಒಡಂಬಡಿಕೆ ಅಗತ್ಯತೆಗಳನ್ನು ಪೂರೈಸಿದ ಯೇಸುಕ್ರಿಸ್ತನ ಮೂಲಕ ಧೈರ್ಯದಿಂದ ದೇವರ ಹತ್ತಿರಕ್ಕೆ ಬರುವುದಕ್ಕೆ ಸಾಧ್ಯವಾಗಿರುವುದು ಹೊಸ ಒಡಂಬಡಿಕೆಯಿಂದಲೇ.

ಹಳೆಯ ಒಡಂಬಡಿಕೆಯ ಆರಂಭವು ದೇವದರ್ಶನ ಗುಡಾರದ ಆರಂಭವನ್ನು ಮತ್ತು ಯಾಜಕರ ಪ್ರತಿಷ್ಠೆಯನ್ನು ಒಳಗೊಂಡಿರುವುದನ್ನು ಇಬ್ರಿಯ ಪತ್ರಿಕೆಯು ಉಲ್ಲೇಖಿಸುತ್ತದೆ (ಇಬ್ರಿಯ 9:18–21 ವಚನಗಳನ್ನು ವಿಮೋಚನಕಾಂಡ 40ನೇ ಅಧ್ಯಾಯ, ಯಾಜಕಕಾಂಡ 8 ಮತ್ತು 9ನೇ ಅಧ್ಯಾಯಗಳೊಂದಿಗೆ ಹೋಲಿಸಿರಿ. ದೇವರ ಮತ್ತು ಜನರ ಮಧ್ಯೆ ನಿಕಟವಾದ ಸಂಬಂಧವನ್ನು ಏರ್ಪಡಿಸುವುದೇ ಒಡಂಬಡಿಕೆಯ ಉದ್ದೇಶವಾಗಿತ್ತು (ವಿ.ಕಾಂಡ 19:4–6). ಇಸ್ರಾಯೇಲ್ಯರು ಈ ಸಂಬಂಧವನ್ನು ಅಂಗೀಕಾರ ಮಾಡಿಕೊಂಡಮೇಲೆ ದೇವರು ಅವರ ಮಧ್ಯೆ ವಾಸಿಸುವುದಕ್ಕಾಗುವಂತೆ ಕೂಡಲೆ ತನಗೋಸ್ಕರ ಒಂದು ಆಲಯವನ್ನು ಕಟ್ಟಬೇಕೆಂದು ತಕ್ಷಣ ಅಪ್ಪಣೆ ಮಾಡಿದನು. ದೇವದರ್ಶನ ಗುದಾರದ ಆರಂಭ ಮತ್ತು ಜನರ ಮಧ್ಯೆ ದೇವರ ಪ್ರಸನ್ನತೆಯು ದೇವರ ಮತ್ತು ಇಸ್ರಾಯೇಲ್ಯರ ನಡುವೆ ಒಡಂಬಡಿಕೆಯು ಪೂರ್ಣಗೊಂಡದುದನ್ನು ಸೂಚಿಸುತ್ತದೆ.

ಹೊಸ ಒಡಂಬಡಿಕೆಯ ವಿಷಯದಲ್ಲೂ ಇದು ಸತ್ಯವಾಗಿದೆ. ಹೊಸ ಒಡಂಬಡಿಕೆಯೂ ಸಹಾ ನಮ್ಮ ಪರವಾಗಿ ಯೇಸುಕ್ರಿಸ್ತನ ಯಾಜಕಸೇವೆಯ ಆರಂಭವನ್ನು ಸೂಚಿಸುತ್ತದೆ (ಇಬ್ರಿಯ 5:1–10, ಇಬ್ರಿಯ 7:1–8,73).

ಯೇಸುವು ದೇವರ ಸನ್ನಿಧಿಗೆ ಆರೋಹಣವಾದುದು ದೇವಜನರಿಗೆ ಆರೋಹಣವಾದುದು ದೇವಜನರಿಗೆ ಹೊಸಯುಗವನ್ನು ಆರಂಭಿಸುತ್ತದೆ. ಜಕರೀಯ 3ನೇ ಅಧ್ಯಾಯವು ಮಹಾಯಾಜಕ ಯಹೋಶವನು ಪ್ರತಿನಿಧಿಸುವ ದೇವಜನರ ಮೇಲೆ ಸೈತಾನನು ದೇವರ ಸನ್ನಿಧಿಯಲ್ಲಿ ಆರೋಪ ಮಾಡುವುದನ್ನು ವಿವರಿಸುತ್ತದೆ. ಯೋಬನ ನಿಷ್ಠೆಯ ಮೇಲೆ ಪ್ರಶ್ನೆಗಳನ್ನು ಕೇಳಿ ಆತನ ಮೇಲೆ ಆರೋಪ

ಹೊರಿಸದವನೇ ಯೆಹೋಶವನ ಮೇಲೆ ಆರೋಪ ಮಾಡಿದವನಾಗಿದ್ದಾನೆ (ಯೋಬ 1 ಮತ್ತು 2ನೇ ಅಧ್ಯಾಯ). ಯೇಸುವಿನ ಯಜ್ಞದಿಂದ ಸೈತಾನನು ಪರಲೋಕದಿಂದ ಹೊರಕ್ಕೆ ದೊಬ್ಬಲ್ಪಟ್ಟನು (ಪ್ರಕಟನೆ 12:7–12 ವಚನಗಳನ್ನು ಯೋಹಾನ 12:31 ಮತ್ತು ಯೋಹಾನ 16:11 ವಚನಗಳ ಜೊತೆಗೆ ಹೋಲಿಸಿರಿ). ಈವಾಗ ನಮಗಾಗಿ ಮಧ್ಯಸ್ಥಿಕೆ ವಹಿಸುವವನು ಮತ್ತು ತನ್ನ ತ್ಯಾಗದಿಂದಲೂ ನಂಬಿಗಸ್ತಿಕೆಯಿಂದಲೂ ನಮ್ಮನ್ನು ರಕ್ಷಿಸುವವನು ಯೇಸುವೇ ಆಗಿದ್ದಾನೆ.

ಒಂದು ವೇಳೆ ಸೈತಾನನಿಗೆ ಅನುಮತಿ ಸಿಕ್ಕಿದರೆ ನಮ್ಮ ಮೇಲೆ ಯಾವ ಆರೋಪವನ್ನು ಮಾಡುತಾನೆ? ಆತನು ಸುಳ್ಳುಗಾರನಾಗಿದ್ದಾಗ್ಯೂ ನಿಮಗೆ ದಂಡನೆಯಾಗುವಂತೆ ಮಾಡಲು ಆತನು ಎಷ್ಟು ಸುಳ್ಳು ಹೇಳಬೇಕಾಗುತ್ತದೆ? ನಿಮಗಿರುವ ಒಂದೇ ನಿರೀಕ್ಷೆ ಯಾವುದು?

**ಗುರುವಾರ** **ಮಾರ್ಚ್ 3**

## ಅವರು ಆತನ ಮುಖವನ್ನು ನೋಡುವರು

ಇಬ್ರಿಯ 12:22–24 ವಚನಗಳನ್ನು ಓದಿರಿ. ಯಾವ ಅರ್ಥದಲ್ಲಿ ನಾವು ಪರಲೋಕದ ಯೆರೂಸಲೇಮಿನಲ್ಲಿ ದೇವರ ಸನ್ನಿಧಿಗೆ ಬಂದಿದ್ದೇವೆ?

ವಿಶ್ವಾಸಿಗಳು ಪರಲೋಕದ ಯೆರೂಸಲೇಮು ಎನಿಸಿಕೊಳ್ಳುವ ಸಿನಾಯಿ ಬೆಟ್ಟದ ಬಳಿಗೆ ನಂಬಿಕೆಯಿಂದ ಬಂದರು ಎಂಬುದಾಗಿ ವಾದಿಸುತ್ತಾರೆ. ಈ ಅರ್ಥದಲ್ಲಿ ಹೇಳುವುದಾದರೆ ಭವಿಷ್ಯವನ್ನು ನಿರೀಕ್ಷಿಸುವ ಅನುಭವ ಅವರದಾಗಿತ್ತು. ಹಾಗಾಗಿ ಪರಲೋಕದ ಯೆರೂಸಲೇಮು ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಂಡು ಅವುಗಳನ್ನು ನಿರೀಕ್ಷಿಸುವವರಿಗಾಗಿ ಇದೆ (ಇಬ್ರಿ 11:1).

ಇದು ಸತ್ಯವಾದರೂ ಇದುವೇ ಈ ವಚನಗಳ ಪೂರ್ಣವಾದ ಅರ್ಥವಲ್ಲ. ನಾವು ನಮ್ಮ ಪ್ರತಿನಿಧಿಯಾದ ಯೇಸುವಿನ ಮೂಲಕ ಸಿನಾಯಿ ಬೆಟ್ಟದಲ್ಲಿ ದೇವರ ಸನ್ನಿಧಿಗೆ ಸಹಾ ಬರುವವರಾಗಿದ್ದೇವೆ (ಎಫೆಸ 2:5,6 ಮತ್ತು ಕೊಲಸ್ಸೆ 3:1). ಯೇಸುವಿನ ಆರೋಹಣ ನಂಬಿಕೆಗೆ ಸಂಬಂಧಿಸಿಲ್ಲ. ಆದರೆ ಇದು ಸತ್ಯವಾದ ಘಟನೆಗೆ ಸಂಬಂಧಪಡುತ್ತದೆ. ಆದುದರಿಂದ ಯೇಸುಕ್ರಿಸ್ತನ ಆರೋಹಣವು ಐತಿಹಾಸಿಕವಾದ ಆಯಾಮ ಹೊಂದಿರಲಾಗಿ ಇಬ್ರಿಯರು ನಮ್ಮ ನಂಬಿಕೆಯನ್ನು ಬಿಡದೆ ಹಿಡುಕೊಳ್ಳುವುದಕ್ಕೆ ಬಲವಾದ ಶಕ್ತಿಯನ್ನು ಒದಗಿಸುತ್ತದೆ (ಇಬ್ರಿಯ 4:14,

ಇಬ್ರಿಯ 10:23). "ಆಕಾಶಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವುದರಿಂದ ನಾವು ನಮಗಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ"ವೆಂದು ಪೌಲನು ಹೇಳುತ್ತಾನೆ (ಇಬ್ರಿಯ 4:14,16).

ಹಾಗಾಗಿ ನಾವು ನಮ್ಮ ಪ್ರತಿನಿಧಿಯ ಮೂಲಕ ಈಗಾಗಲೇ ದೇವರ ಸನ್ನಿಧಿಗೆ ಬಂದಿರಲಾಗಿ ಅದಕ್ಕನುಗುಣವಾಗಿ ನಾವು ನಡೆದುಕೊಳ್ಳಬೇಕು. "ಆತನ ಮುಖಾಂತರ ಪರಲೋಕದ ದಾನದ ಅನುಭವನನ್ನು ಹೊಂದಿದ್ದೇವೆ..... ದೇವರವಾಕ್ಯದ ಶ್ರೇಷ್ಠತೆಯನ್ನು ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದ್ದೇವೆ" (ಇಬ್ರಿಯ 6:4,5). ಯೇಸುವಿನ ಆರೋಹಣವು ಮತ್ತು ಪರಲೋಕದಲ್ಲಿ ಆತನು ನಡೆಸುವ ಯಾಜಕ ಸೇವೆಯು ವಾಸ್ತವವಾಗಿದ್ದು ಇದು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸೆಗೆ ಯೋಗ್ಯವಾದದ್ದೂ ಸ್ಥಿರವಾದದ್ದೂ ಆಗಿದೆ (ಇಬ್ರಿ 6:19). ವಾಗ್ದಾನವು ನಂಬತಕ್ಕ ವಿಷಯವಾಗಿದ್ದು ಖಾತ್ರಿಯಾದುದಾಗಿದೆ (ಇಬ್ರಿಯ 7:22). ನಮಗೆ ನಂಬಿಕೆಯೇ ಐತಿಹಾಸಿಕ ಲಂಗರಾಗಿದೆ.

ದೇವರ ವಾಗ್ದಾನವು ಯೇಸುವಿನಿಂದ ನೆರವೇರುವುದು ಮಾತ್ರವಲ್ಲದೆ ನಮ್ಮ ಮೂಲಕವಾಗಿಯೂ ನೆರವೇರುತ್ತದೆ. ಯೇಸುವಿನ ಆರೋಹಣವು ಇಸ್ರಾಯೇಲ್ಯರು ಆಚರಿಸುತ್ತಿದ್ದ ಮೂರು ಜಾತ್ರೆಗಳಲ್ಲಿ ಯೇಸುವು ಪಸ್ಕಹಬ್ಬವನ್ನೂ ಪಂಚಾಶತ್ತಮ ಹಬ್ಬವನ್ನು ತಾನೇ ನೆರವೇರಿಸಿದ್ದಾನೆ, ಆದರೆ ವರ್ಷದ ಕೊನೆಯಲ್ಲಿ ಆಚರಿಸಬೇಕಾದ ಸುಗ್ಗಿ ಹಬ್ಬವು (ಫಲಸಂಗ್ರಹ ಜಾತ್ರೆ) ಇನ್ನೂ ಉಳಿದಿದೆ ಎಂದು ಇಬ್ರಿಯ ಪತ್ರಿಕೆ ಪ್ರಕಟನೆ ಪುಸ್ತಕ ನಮಗೆ ತಿಳಿಸುತ್ತವೆ.

ಪರಲೋಕದಲ್ಲಿ ನಾವು ಯೇಸುವಿನ ಜೊತೆಗೂಡಿ ದೇವರು ತನ್ನ ಕೈಯಿಂದ ಕಟ್ಟಿದ ನಗರವಾದ ಹೊಸ ಯೆರೂಸಲೇಮಿನಲ್ಲಿ ಇದನ್ನು ಆಚರಿಸುತ್ತೇವೆ (ಇಬ್ರಿಯ 11:10 ಹಾಗೆಯೇ 13–16 ವಚನಗಳನ್ನು ನೋಡಿರಿ). ನಾವು ವಾಸಿಸುವುದಕ್ಕೆ ನಾವೇ ನಿವಾಸಗಳನ್ನು ಕಟ್ಟುವುದಿಲ್ಲ. ಆದರೆ ದೇವರು ನಿರ್ಮಿಸಿದ ನಿವಾಸಗಳು ಪರಲೋಕದಿಂದ ಇಳಿದು ಬರುತ್ತವೆ, ಅಲ್ಲಿ ನಾವು ನಿತ್ಯಕ್ಕೂ ಆತನ ಜೊತೆ ವಾಸಿಸುತ್ತೇವೆ (ಪ್ರಕ 7:15–17, ಪ್ರಕಟನೆ 21:1–4, ಪ್ರಕಟನೆ 22:1–5, ಆ.ಕಾಂಡ 6:24–26).

ಈ ಲೋಕದಲ್ಲಿ, ಕಷ್ಟ ಸಂಕಟಗಳ ಮಧ್ಯದಲ್ಲಿ ನಾವು ನಮಗಿರುವ ನಿತ್ಯಜೀವದ ವಾಗ್ದಾನವನ್ನು ಹೇಗೆ ವಾಸ್ತವವನ್ನಾಗಿ ಮಾಡಿಕೊಳ್ಳಬಹುದು? ಇವುಗಳೆಲ್ಲ ವಾಸ್ತವ ಸಂಗತಿಗಳಲ್ಲ. ಇಲ್ಲಿ ಈವಾಗ ನಮ್ಮ ಜೀವನವು ಚೆನ್ನಾಗಿದೆ ಎಂದು ಭಾವಿಸಿಕೊಳ್ಳಲು ಸಹಾಯ ಮಾಡುವ ಕೇವಲ ಕಲ್ಪನೆಗಳು ಎಂದು ಹೇಳುವವರಿಗೆ ನೀವು ಯಾವ ಉತ್ತರವನ್ನು ಕೊಡಬಲ್ಲಿರಿ?

**ಶುಕ್ರವಾರ** **ಮಾರ್ಚ್ 4**

**ಹೆಚ್ಚಿನ ಚಿಂತನೆ :** ಯೇಸುಕ್ರಿಸ್ತನು ಪರಲೋಕಕ್ಕೆ ಏರಿ ಹೋಗಿರುವುದು ಆತನ ಹಿಂಬಾಲಕರು ವಾಗ್ದಾನ ಮಾಡಿದ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾರೆ ಎಂಬುದಕ್ಕೆ ಒಂದು ಸೂಚನಫಲಕವಾಗಿದೆ. ಇದಕ್ಕಾಗಿ ಅವರು ತಮ್ಮ ಕೆಲಸಗಳಿಗೆ ತೊಡಗುವ ಮುನ್ನ ಕಾದುಕೊಂಡರು. ಯೇಸುವು ಪರಲೋಕ ದ್ವಾರಗಳನ್ನು ದಾಟಿದಾಗ ಆತನು ಪರಿಶುದ್ಧ ದೂತರ ಆರಾಧನೆಯ ಮಧ್ಯೆ ಸಿಂಹಾಸನಾ ರೂಢನಾದನು. ಈ ಒಂದು ಸಂಸ್ಕಾರವು ಮುಗಿಯುತ್ತಿದ್ದಂತೆಯೇ ಪವಿತ್ರಾತ್ಮನು ಶಿಷ್ಯರ ಮೇಲೆ ಇಳಿದು ಬರಲಾಗಿ ಯೇಸುವು ದಿಟವಾಗಿಯೂ ತಂದೆಗೆ ಅನಾದಿಯಿಂದಲೂ ಇದ್ದಂತಹ ಮಹಿಮೆಯನ್ನು ಹೊಂದಿದನು. ವಿಮೋಚಿತರ ಆರಂಭೋತ್ಸವವು ನೆರವೇರಿತೆಂಬುದಕ್ಕೆ ಪರಲೋಕವು ಸ್ಪಂದಿಸಿತು ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಶಿಷ್ಯರಿಗೆ ಅಭಿಷೇಕ ಮಾಡಿದನು. ಯೇಸುವು ಭೂಪರಲೋಕದ ಅಧಿಕಾರ ಪಡೆದವನಾಗಿ ತನ್ನ ಜನರಿಗೋಸ್ಕರ ಅಭಿಷಿಕ್ತನಾಗಿ ತಾನು ವಾಗ್ದಾನ ಮಾಡಿದ ಪ್ರಕಾರ ತನ್ನ ಅನುಯಾಯಿಗಳ ಮೇಲೆ ತಾನು ಹೊಂದಿದ್ದ ಯಾಜಕತ್ವ ಮತ್ತು ಪ್ರಭುತ್ವದ ಗುರುತಾಗಿ ಪವಿತ್ರಾತ್ಮನನ್ನು ಕಳುಹಿಸಿದನು.

ಅವರು ಭರವಸೆ ತುಂಬಿದವರಾಗಿ ಯೇಸುವಿನ ಹೆಸರನ್ನು ಎತ್ತಿ ಮಾತಾಡುವವರಾದರು. ಯಾಕೆಂದರೆ ಆತನು ಅವರಿಗೆ ಸ್ನೇಹಿತನೂ ಹಿರಿಯ ಸಹೋದರನೂ ಆಗಿದ್ದನಲ್ಲವೆ? ಅವರು ಪರಲೋಕದ ನಿಕಟವಾದ ಸಂಪರ್ಕಕ್ಕೆ ತರಲ್ಪಟ್ಟವರಾಗಿ ಆತನೊಂದಿಗೆ ಪರಲೋಕ ನಿವಾಸದಲ್ಲಿ ಕುಳಿತುಕೊಂಡರು. ಆತನಿಗೆ ಸಾಕ್ಷಿ ನೀಡುವವರಾಗಿ ತಮ್ಮ ಆಲೋಚನೆಗಳಿಗೆ ಉರಿಯುವ ಭಾಷೆಯನ್ನು ತೊಡಿಸಿ ಮಾತಾಡಿದರು" – ಎಲೆನ್ ಜಿ ವೈಟಮ್ಮನವರ ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್, ಪುಟ 38, 46.

## ಚರ್ಚಿಸಬೇಕಾದ ಪ್ರಶ್ನೆಗಳು

1. 'ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ ಎಂಬುದಾಗಿ ನನ್ನ ಮನಸ್ಸು ದೇವರಿಗಾಗಿ, ಚೈತನ್ಯರೂಪನಾದ ದೇವರಿಗಾಗಿ ಹಾರೈಸುತ್ತದೆ" ಎಂದು ಕೀರ್ತನೆಗಾರನು ಹೇಳುತ್ತಾನೆ (ಕೀರ್ತ 42:2). ಆತನ ಸನ್ನಿಧಿಗೆ ಬರಲು ನಾವು ಸಹಾ ಅಷ್ಟೇ ಹಂಬಲವನ್ನು ಹೇಗೆ ಹೊಂದುತ್ತೇವೆ? ನಾವು ಆತನ ಸನ್ನಿಧಿಗೆ ನಂಬಿಕೆಯಿಂದ ಬಂದಾ ಈವಾಗ ಆರಾಧಿಸಿ ಆನಂದ ಪಡುವುದಕ್ಕೆ ಮನಸ್ಸಿಲ್ಲದೆ ಹೋದರೆ ನಾವು ಭವಿಷ್ಯದಲ್ಲಿ ಆನಂದ ಪಡುವುದು ಸಾಧ್ಯವೇ? ದೇವರ ಸನ್ನಿಧಿಯಲ್ಲಿ ನಮ್ಮನ್ನು ಆನಂದಪಡುವಂತೆ ಮಾಡುವ ಅಂಶಗಳು ಯಾವುವು?

2. ನಂಬಿಕೆಯನ್ನು ಗೇಲಿ ಮಾಡುವ ಒಂದು ಪುಸ್ತಕದಲ್ಲಿ ಒಬ್ಬನು ನಮ್ಮ ನಂಬಿಕೆ ಹೊಂದಿರುವಂತಹ ಒಂದು ಯಂತ್ರಮಾನವನನ್ನು ಸೃಷ್ಟಿಸುತ್ತಾನೆ. ಇದು ಕೇವಲ ಕಾಲ್ಪನಿಕ (ಕೃತ್ರಿಮ)ವಾಗಿದ್ದಾಗ್ಯೂ ಅರಣ್ಯದಲ್ಲಿ ಇಸ್ರಾಯೇಲ್ಯರು ತಮ್ಮ ಪರವಾಗಿ ದೇವರ ಮುಂದೆ ಮಾತಾಡಲು ಮಧ್ಯಸ್ಥರನ್ನು ಬೇಡಿಕೊಳ್ಳುತ್ತಿದ್ದರು. ಅವರಂತೆ ನಾವು ಮಧ್ಯಸ್ಥರ ಮೇಲೆ ಆತುಕೊಳ್ಳದಂತೆ ಹೇಗೆ ಎಚ್ಚರ ವಹಿಸಬಹುದು? ನಾವು ಇತರರನ್ನು ಸತ್ಯವೇದವನ್ನು ಅಧ್ಯಯನ ಮಾಡಿಸಿ ಅದರಲ್ಲಿ ಶ್ರೇಷ್ಠವಾದ ಸತ್ಯವನ್ನು ನಮ್ಮ ಪರವಾಗಿ ಕಂಡುಕೊಳ್ಳುವಂತೆ ಒಲವನ್ನು ತೋರಿಸುತ್ತೇವೆ. ಇದರಿಂದ ಕೆಲವರು ತಮ್ಮ ಪ್ರಾರ್ಥನೆಗಿಂತ ಇತರರು ತಮ್ಮ ಪರವಾಗಿ ಮಾಡುವ ಪ್ರಾರ್ಥನೆಯು ದೇವರ ಸನ್ನಿಧಿಯಲ್ಲಿ ಪ್ರಾಮುಖ್ಯತೆ ಪಡೆಯುತ್ತದೆಯೆಂದು ಭಾವಿಸಿಕೊಳ್ಳುವ ಪ್ರಚೋದನೆಗೆ ಒಳಗಾಗಬಹುದು. ನಾವು ಈ ಆಧ್ಯಾತ್ಮಿಕವಾದ ಮೋಸವನ್ನು ಯಾಕೆ ತಪ್ಪಿಸಬೇಕು? ನಾವು ಬೇರೊಬ್ಬರ ಸಹಾಯವಿಲ್ಲದೆ ಯೇಸುವಿನ ಮೂಲಕ ದೇವರ ಹತ್ತಿರಕ್ಕೆ ನಾವೇ ಹೋಗಬೇಕಲ್ಲವೇ?

3. ಇಬ್ರಿಯ ಪತ್ರಿಕೆಯು ರಕ್ಷಣೆಯ ಬಗ್ಗೆ ಭರವಸೆಯನ್ನು ತುಂಬುತ್ತದೆ. ಆದಾಗ್ಯೂ ನಾವು ಭಾವನೆಯನ್ನು ಭರವಸೆಯನ್ನಾಗಿ ಮಾಡಿಕೊಳ್ಳದಂತೆ ಹೇಗೆ ಎಚ್ಚರ ವಹಿಸಬೇಕು?